■ ಹನಿ

## ‘ಗಣಿತಜ್ಞೆ’ಯ ವಿದಾಯ



ಬೆಂಗಳೂರಿನಲ್ಲಿ ನಾರಾಯಣಮೂರ್ತಿ, ಅಜೀಮ್ ಪ್ರೇಮ್‌ಜಿ ಮುಂತಾದವರು ಅಂತರರಾಷ್ಟ್ರೀಯ ಆಕರ್ಷಣೆ ಎನ್ನಿಸಿಕೊಳ್ಳುವುದಕ್ಕಿಂತ ಎಷ್ಟೋ ವರ್ಷಗಳ ಮುಂಚೆ ಬಹುದೊಡ್ಡ ಸೆಲೆಬ್ರಿಟಿ ಆಗಿದ್ದವರು ಶಕುಂತಲಾದೇವಿ. ಈಕೆಯನ್ನು ಭೇಟಿಯಾಗಲೆಂದೇ ಜಗತ್ತಿನ ಪ್ರತಿಷ್ಠಿತರು ಬೆಂಗಳೂರಿಗೆ ಬರುತ್ತಿದ್ದರು. ಈಕೆಯೂ ಆಗಾಗ್ಗೆ ಲಂಡನ್, ಪ್ಯಾರಿಸ್, ನ್ಯೂಯಾರ್ಕ್ ಎಂದು ಜಗತ್ತಿನಾದ್ಯಂತ ತಿರುಗಾಡಿದವರು. ಕೇವಲ ಮೂರನೇ ಇಯತ್ತೆ ಮಾತ್ರ ಕಲಿತಿದ್ದರೂ, ತಮ್ಮ ಅದ್ಭುತ ಜ್ಞಾಪಕಶಕ್ತಿಯಿಂದಾಗಿ ‘ಗಣಿತದ ಮಾಂತ್ರಿಕ ಲೋಕ’ವನ್ನು ಅಕ್ಷರಶಃ ಆಳಿದವರು ಈ ದೇವಿ.

70– 80ರ ದಶಕದಲ್ಲಿ ಶಕುಂತಲಾದೇವಿ ಎಂದರೆ ಜಗತ್ತಿನಾದ್ಯಂತ ಗಣಿತಜ್ಞರಿಗೆ ದೊಡ್ಡ ವಿಸ್ಮಯ. 1970ರಲ್ಲಿ ಮೊದಲ ಬಾರಿಗೆ ಜರ್ಮನಿಯಲ್ಲಿ ಕಂಪ್ಯೂಟರ್ ಜತೆ ಸ್ಪರ್ಧಿಸಿ ಗೆದ್ದಾಗ ಅಲ್ಲಿನವರು ಮರ್ಸಿಡಿಸ್ ಬೆಂಜ್ ಕಾರೊಂದನ್ನು ಕೊಡುಗೆಯಾಗಿ ನೀಡಿದ್ದರು. 1977ರಲ್ಲಿ ಡಲ್ಲಾಸ್‌ನಲ್ಲಿ 188138517ರ ವರ್ಗಮೂಲವನ್ನು ಕಂಡು ಹಿಡಿಯಲು ಕಂಪ್ಯೂಟರ್ ಜತೆ ಸ್ಪರ್ಧಿಸಿ ಗೆದ್ದ ಬಳಿಕ ಶಕುಂತಲಾದೇವಿಯ ಖ್ಯಾತಿ ಇನ್ನಷ್ಟು ಹೆಚ್ಚಿತು. 1980ರ ಜೂನ್ 18ರಂದು ಲಂಡನ್ನಿನ ಇಂಪೀರಿಯಲ್ ಕಾಲೇಜಿನ ಕಂಪ್ಯೂಟರ್ ವಿಭಾಗದವರು ‘7,686,369,774,870 ಗೆ 2,465,099,745,779-ರಿಂದ ಗುಣಿಸಿ’ ಎಂದು ಈಕೆಗೆ ಸವಾಲು ಹಾಕಿದರು. ಕೇವಲ 28 ಸೆಕೆಂಡುಗಳಲ್ಲಿ ಈಕೆ ಸರಿಯಾದ ಉತ್ತರವನ್ನು ನೀಡಿದ್ದು ನೋಡಿ ಇಡೀ ಜಗತ್ತೇ ದಂಗಾಯಿತು. ಅದು ಗಿನ್ನೆಸ್ ವಿಶ್ವದಾಖಲೆಗೂ ಸೇರಿತು.

ತಂದೆ ಸರ್ಕಸ್‌ನಲ್ಲಿ ಹಗ್ಗದ ಮೇಲೆ ನಡೆಯುವ ಕಲಾವಿದರಾಗಿದ್ದರು. 3 ವರ್ಷದ ಎಳವೆಯಲ್ಲೇ ತಂದೆಯ ಜತೆ ಸರ್ಕಸ್ ಕಂಪೆನಿ ಸೇರಿದವರು ಈ ಶಕುಂತಲಾ. 12ರ ಹರೆಯದಲ್ಲೇ ಏಳು ಮಂದಿಯ ಕುಟುಂಬವನ್ನು ಸಾಕಲು ದುಡಿಮೆಗೆ ಒಗ್ಗಿಕೊಂಡವರು. ಆದರೆ ಈಕೆಯ ಗಣಿತದ ಮೋಹ ಈಕೆಯನ್ನು ಖ್ಯಾತಿಯ ತುತ್ತತುದಿಗೇರಿಸಿತು. ಜಗದ್ವಿಖ್ಯಾತಿ ಹೊಂದಿದ ಬಳಿಕವೂ ಅಕ್ಕಪಕ್ಕದ ಮನೆಯ ಮಕ್ಕಳಿಗೆ ಪುಕ್ಕಟೆಯಾಗಿ ಗಣಿತದ ಪಾಠ ಹೇಳಿಕೊಡುತ್ತಿದ್ದ ಈಕೆ, ಪ್ರತಿಯೊಬ್ಬರೂ ಗಣಿತವನ್ನು ಖುಷಿಯಿಂದ ಕಲಿಯಬೇಕು ಎನ್ನುತ್ತಿದ್ದರು. ಅದಕ್ಕೆಂದೇ ಹತ್ತಾರು ಪುಸ್ತಕಗಳನ್ನು ಬರೆದರು. ಮಧ್ಯವಯಸ್ಸಿನ ಬಳಿಕ ಜ್ಯೋತಿಷ್ಯಶಾಸ್ತ್ರ ಮತ್ತು ವಾಸ್ತುಶಾಸ್ತ್ರದ ಬಗ್ಗೆಯೂ ಒಲವು ಬೆಳೆಸಿಕೊಂಡ ದೇವಿ, ಪಾಕಶಾಸ್ತ್ರ ಪ್ರವೀಣೆಯೂ ಆಗಿದ್ದರು. ಜಗದ್ವಿಖ್ಯಾತ ಸೆಲೆಬ್ರಿಟಿಯಾಗಿದ್ದರೂ, ಮಕ್ಕಳಿಗೆ ಪಾಠ ಮಾಡುವಾಗ ಎಂದೂ ತಾಳ್ಮೆ ಕಳೆದುಕೊಳ್ಳದ ಅತ್ಯುತ್ತಮ ಟೀಚರ್ ಈಕೆ. 82ರ ಇಳಿವಯಸ್ಸಿನಲ್ಲಿ ಹೃದಯದ ತೊಂದರೆಯಿಂದ ಇನ್ನಿಲ್ಲವಾದ ಶಕುಂತಲಾದೇವಿ ಕರ್ನಾಟಕದ ಹೆಮ್ಮೆಯಾಗಿದ್ದುದಂತೂ ಸುಳ್ಳಲ್ಲ.

## ಮುಷರ್ರಫ್ ಮೂರ್ಖತನ

‘ಹುಲಿಸವಾರಿ ಮಾಡಿದವರು ಆ ಬಳಿಕ ಇಳಿಯುವಂತಿಲ್ಲ’ ಎನ್ನುವುದು ಹಳೆಯ ಗಾದೆ. ಇಳಿದಾಕ್ಷಣ ಆ ಹುಲಿಯೇ ಆತನನ್ನು ತಿಂದುಬಿಡುತ್ತದೆ ಎನ್ನುವುದು ಈ ಗಾದೆ ಕಲಿಸಿದ ಪಾಠ. ಆದರೆ ಪಾಕಿಸ್ತಾನದ ಅಧ್ಯಕ್ಷರಾಗಿದ್ದ ಜನರಲ್ ಪರ್ವೇಜ್ ಮುಷರ್ರಫ್ ಒಂದು ಕಾಲದಲ್ಲಿ ಪಾಕಿಸ್ತಾನದ ಆಡಳಿತವೆಂಬ ಹುಲಿ ಸವಾರಿಯನ್ನು ಯಶಸ್ವಿಯಾಗಿ ಮಾಡಿ, ಹುಲಿ ಮೇಲಿಂದ ಕೆಳಗಿಳಿದ ಬಳಿಕವೂ ಬಚಾವಾದವರು. ಆದರೆ ಈಗ ಮತ್ತೆ ಅಧಿಕಾರದ ಮೋಹದಿಂದ ಪಾಕಿಸ್ತಾನಕ್ಕೆ ಮರಳಿ ಹುಲಿಯ ಬೋನಿಗೆ ಬಿದ್ದಿದ್ದಾರೆ.

ಪಾಕಿಸ್ತಾನದ ಮಿಲಿಟರಿ ಮುಖ್ಯಸ್ಥರಾಗಿದ್ದ ಮುಷರ್ರಫ್, 1999ರಲ್ಲಿ ದಂಗೆ ಎದ್ದು ಪ್ರಧಾನಿ ನವಾಜ್ ಷರೀಫ್‌ರನ್ನು ಪದಚ್ಯುತಗೊಳಿಸಿ ಸಂವಿಧಾನವನ್ನು ತಿದ್ದಿ ಅಧ್ಯಕ್ಷರಾದರು. 2008-ರವರೆಗೆ ಚಾಣಾಕ್ಷತನದಿಂದ ‘ಹುಲಿ ಸವಾರಿ’-ಯನ್ನು ನಿರ್ವಹಿಸಿದ್ದು ಸುಳ್ಳಲ್ಲ. ಆದರೆ 2008ರಲ್ಲಿ ಅನಿವಾರ್ಯವಾಗಿ ರಾಜೀನಾಮೆ ಕೊಡಬೇಕಾಯಿತು. ಮಿಲಿಟರಿ ಮತ್ತು ಐಎಸ್‌ಐ



ಜತೆಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದರಿಂದ ಅಧಿಕಾರ ತ್ಯಜಿಸಿದರೂ ಅಪಾಯಕ್ಕೆ ಒಳಗಾಗಲಿಲ್ಲ. ಆ ಬಳಿಕ ಅಧಿಕಾರದ ಉಸಾಬರಿಯೇ ಬೇಡವೆಂದು ಲಂಡನ್ನಿಗೆ ತೆರಳಿ ಅಲ್ಲಿಯೇ ವಾಸ್ತವ್ಯ ಹೂಡಿದರು.

ಕಳೆದ ತಿಂಗಳು ಪಾಕಿಸ್ತಾನದಲ್ಲಿ ಚುನಾವಣೆ ಘೋಷಣೆಯಾದಾಗ ಮುಷರ್ರಫ್‌ಗೆ ಹಳೆಯ ಅಧಿಕಾರದ ರುಚಿ ನೆನಪಾಗಿರಬೇಕು. ಹಾಗೆಂದೇ ನಾಲ್ಕು ವರ್ಷಗಳ ಲಂಡನ್ ವಾಸ ತ್ಯಜಿಸಿ ಪಾಕಿಸ್ತಾನಕ್ಕೆ ಮರಳಿದರು. ಚುನಾವಣೆಯಲ್ಲಿ ಮುಸ್ಲಿಂಲೀಗ್‌ನಿಂದ ಸ್ಪರ್ಧಿಸಿ ಮತ್ತೆ ಅಧಿಕಾರ ಪಡೆಯುವ ಅವರ ತಂತ್ರ ಈಗ ತಿರುಗುಬಾಣವಾಗಿದೆ. ಮುಷರ್ರಫ್ ಅಧಿಕಾರದ ಅವಧಿಯಲ್ಲಿ ಜೈಲಿಗೆ ತಳ್ಳಲ್ಪಟ್ಟಿದ್ದ ಹೈಕೋರ್ಟ್ ನ್ಯಾಯಾಧೀಶರೆಲ್ಲ ಒಟ್ಟಾಗಿ ಮುಷರ್ರಫ್ ಬೆನ್ನು ಹತ್ತಿದ್ದಾರೆ. ಹಳೆಯ ಕೇಸ್‌ನಲ್ಲಿ ಕೋರ್ಟಿಗೆ ಹಾಜರಾದ ಮುಷರ್ರಫ್ ಈಗ ತಮ್ಮ ಮನೆಯಲ್ಲೇ ಗೃಹಬಂಧಿ. ‘ಈ ಸಲ ಚುನಾವಣೆಗೆ ಸ್ಪರ್ಧಿಸುವಂತಿಲ್ಲ’ ಎಂದು ಹೈಕೋರ್ಟ್ ಬೇರೆ ತೀರ್ಪು ನೀಡಿದೆ. ಇನ್ನೊಂದೆಡೆ ತಾಲಿಬಾನ್ ಸಂಘಟನೆ ಮುಷರ್ರಫ್‌ಗೆ ಜೀವ ಬೆದರಿಕೆ ಹಾಕಿದೆ. ಈ ಮಧ್ಯೆ ಬೇನಜೀರ್ ಭುಟ್ಟೊ ಮತ್ತು ಅಕ್ಬರ್ ಬುಗ್ತಿ ಕೊಲೆ ಪ್ರಕರಣದಲ್ಲೂ ಸಂಚು ಹೂಡಿದ ಆರೋಪಪಟ್ಟಿ ಮುಷರ್ರಫ್ ಮೇಲಿದೆ. ವಿದೇಶದಿಂದ ತಾಯ್ನಾಡಿಗೆ ಮರಳಿದ್ದೇ ಮೂರ್ಖತನದ ಕೆಲಸ ಎಂಬುದೀಗ ಸಾಬೀತಾಗಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65